**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಕೆ.ಆರ್ ನಗರ**

**ಸಿ.ಸಿ. ನಂ.955/2022**

**ಫಿರ್ಯಾದಿಃ** ಸಾಲಿಗ್ರಾಮ ಪೊಲೀಸರು

**ವಿರುದ್ಧ**

**ಆರೋಪಿತರುಃ**

ಕುಮಾರ ಬಿನ್ ಪುಟ್ಟಯ್ಯ, 44 ವರ್ಷ,
ವಾಸಃ ಮಲುಗನಹಳ್ಳಿ ಗ್ರಾಮ, ಸೀಗವಾಳು ಪೋಸ್ಟ್,
ಸಾಲಿಗ್ರಾಮ ತಾಲ್ಲೂಕು, ಮೈಸೂರು ಜಿಲ್ಲೆ.

**ದೋಷಾರೋಪಣೆ**

**ಶ್ರೀಮತಿ ಗಾಯತ್ರಿ, ಬಿ.ಕಾಂ., ಎಲ್.ಎಲ್.ಎಂ.** ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿ ನ್ಯಾಯಾಧೀಶರು, ಕೆ.ಆರ್.ನಗರ, ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಿಸುವುದೇನೆಂದರೆಃ

ದಿನಾಂಕಃ 16.11.2020 ರಂದು ಸಂಜೆ 4.30 ರಿಂದ 5.30 ಗಂಟೆ ಯವರೆಗೆ ನ್ಯೂಸ್-14 ಕನ್ನಡ ಚಾನೆಲ್ ನಲ್ಲಿ ವರದಿಗಾರ ಕೆ.ಜೆ.ಹಳ್ಳಿ ಸುರೇಶ್ ರವರಿಗೆ ಆರೋಪಿಯಾದ ನೀವು ತನಿಖಾ ಕಾಲದಲ್ಲಿ ಅನುಕಂಪ ಬರುವ ರೀತಿಯಲ್ಲಿ ಇಲ್ಲಸಲ್ಲದನ್ನು ಪೊಲೀಸರ ಬಗ್ಗೆ ಸುಳ್ಳು ಹೇಳಿಕೆ ನೀಡಿ, ಮುಂದುವರೆದು ಸದರಿ ನ್ಯೂಸ್-14 ಚಾನೆಲ್‌ನ ಸಂದರ್ಶನದಲ್ಲಿ ಕುಮಾರ ನೊಂದಿಗೆ ''ಪೊಲೀಸ್ ಅಧಿಕಾರಿಗಳಿಂದ ದಲಿತ ಕುಮಾರಪ್ಪನಿಗೆ ಜೀವ ಬೆದರಿಕೆ''? ಎಂಬ ಶೀರ್ಷಿಕೆಯ ಸಂದರ್ಶನದಲ್ಲಿ ಏಕಪಕ್ಷೀಯವಾಗಿ ಯಾವುದೇ ವಿಚಾರವನ್ನು ಸತ್ಯ ಶೋಧನೆ ಮಾಡದೇ ಅವಾಚ್ಯ ಶಬ್ದಗಳಿಂದ ನಿಂದಿಸಿ ಸಾರ್ವಜನಿಕ ಉಪದ್ರವ ಮಾಡಿದ್ದರಿಂದ ಭಾ.ದಂ.ಸಂ.ಕಲಂ.290 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞೆಯೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಮೇಲಿನ ಆರೋಪದ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿರುತ್ತೇನೆ.

**ಆಪಾದನೆ**

ಪ್ರಶ್ನೆ-1 ಈಗ ನಿಮಗೆ ಓದಿ ಹೇಳಲಾದ ಆಪಾದನೆ ತಿಳಿಯಿತೇ?

ಉತ್ತರಃ ಆರೋಪಿ

ಪ್ರಶ್ನೆ-2 ಮೇಲ್ಕಂಡ ಆರೋಪವನ್ನು ಒಪ್ಪಿಕೊಳ್ಳುವಿಳಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ಆರೋಪಿ

ಮೇಲ್ಕಂಡ ಆಪಾದನೆಯನ್ನು ಆರೋಪಿಗಳಿಗೆ ಓದಿ ಹೇಳಿದ್ದು ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿಗಳು ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದೃಢೀಕರಿಸುತ್ತೇನೆ.

(ಗಾಯತ್ರಿ)
ಹೆಚ್ಚುವರಿ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಕೆ.ಆರ್.ನಗರ.

ಆರೋಪಿ ಸಹಿಃ

ದಿನಾಂಕಃ 29.12.2022